# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕವಿಪ್ರನಿನಿ ಮತ್ತು ವಿಸಕಂಗಳ ನೂತನ ವ್ಯಾಖ್ಯಾನಿತ ಕೊಡುಗೆ ಪಿಂಚಣಿ ಯೋಜನೆ ಘಟಕ

ಸಂಖ್ಯೆ: ಕೆಇಎನ್‌ಡಿಸಿಪಿಎಸ್/ಬಿ93/35974/2018-19/ ೮೪೫-13 ದಿನಾಂಕ: 04 JUL 2018

| |
|---|
| **NDCPS** ಅಧಿಕಾರಿಗಳ/ನೌಕರರ ವೈಯಕ್ತಿಕ ಗಮನಕ್ಕೆ |

## ಸುತ್ತೋಲೆ

ವಿಷಯ: ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಫಲಾನುಭವಿಗಳ ಖಾತೆಯಲ್ಲಿ ಜಮಾ ಇರುವ ಪಿಂಚಣಿ ವಂತಿಗೆ ವ್ಯತ್ಯಾಸದ ಬಗ್ಗೆ ಸಲ್ಲಿಸುತ್ತಿರುವ ಮನವಿಗಳ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ. ಕವಿಪ್ರನಿನಿ/ಬಿ93/35989/2018-19/ಸಿವೈಸ್-11 ದಿನಾಂಕ 08.05.2018.

*********

ಮೇಲಿನ ಉಲ್ಲೇಖದ ಸುತ್ತೋಲೆಯಲ್ಲಿ ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿಯ ಫಲಾನುಭವಿಗಳಿಗೆ 01.04.2006 ರಿಂದ 31.03.2018ರವರೆಗೆ ಅವರ ಖಾತೆಯಲ್ಲಿ ಜಮೆಗೊಂಡಿರುವ ವಂತಿಗೆ ವಿವರಗಳನ್ನು ಪರಿಶೀಲಿಸಿಕೊಳ್ಳಲು ಅನುವು ಮಾಡಿಕೊಟ್ಟಿರುವ ಬಗ್ಗೆ ಸೂಚನೆಗಳನ್ನು ನೀಡಲಾಗಿತ್ತು. ಈ ಸಂಬಂಧ ವಂತಿಗೆ ಮೊತ್ತದಲ್ಲಿ ವ್ಯತ್ಯಾಸಗಳು ಕಂಡುಬಂದಲ್ಲಿ ಸಮುಚಿತ ಮಾರ್ಗದಲ್ಲಿ ಕವಿಪ್ರನಿನಿ ಮತ್ತು ವಿಸಕಂಗಳ ನೂತನ ಪಿಂಚಣಿ ಯೋಜನೆ ಘಟಕಕ್ಕೆ ಮನವಿ ಸಲ್ಲಿಸಲು ಸೂಚಿಸಲಾಗಿತ್ತು.

ಮೇಲಿನ ಸೂಚನೆಯಂತೆ, ಹಲವಾರು ಫಲಾನುಭವಿಗಳು ವಂತಿಗೆ ಮೊತ್ತದ ವ್ಯತ್ಯಾಸದ ಬಗ್ಗೆ ಈ ಕಛೇರಿಗೆ ನೇರವಾಗಿ ಮತ್ತು ಸಮುಚಿತ ಮಾರ್ಗದಲ್ಲಿ ಮನವಿಗಳನ್ನು ಸಲ್ಲಿಸಿರುತ್ತಾರೆ. ಈ ರೀತಿಯ ಬಹುತೇಕ ಮನವಿಗಳಲ್ಲಿ ತಂತ್ರಾಂಶದಲ್ಲಿನ ವಂತಿಗೆಯು ಕಡಿಮೆಯಿದ್ದು, ವ್ಯತ್ಯಾಸದ ಮೊತ್ತವನ್ನು ತಮ್ಮ ಖಾತೆಗೆ ಜಮಾ ಮಾಡಬೇಕೆಂದು ಕೋರಿರುತ್ತಾರೆ. ಈ ರೀತಿ ಸ್ವೀಕೃತವಾದ ಎಲ್ಲಾ ಮನವಿಗಳನ್ನು ಪರಿಶೀಲಿಸಲಾಗಿ, ಬಹುತೇಕ ಪ್ರಕರಣಗಳಲ್ಲಿ ಫಲಾನುಭವಿಗಳು ತಿಳಿಸಿರುವ ಅವಧಿಗಳಲ್ಲಿ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ತಮ್ಮ ಲೆಕ್ಕಘಟಕಗಳಿಂದ ಈ ಕಛೇರಿಗೆ ಸಲ್ಲಿಸಿರುವ ಅನುಬಂಧ-4 ಮತ್ತು ತಂತ್ರಾಂಶದಲ್ಲಿನ ವಂತಿಗೆ ವಿವರಗಳು ತಾಳೆಯಾಗುತ್ತಿದ್ದು, ಆ ರೀತಿಯ ವ್ಯತ್ಯಾಸಗಳಿಗೆ ಲೆಕ್ಕಘಟಕಗಳಲ್ಲಿನ ಲೋಪದೋಷಗಳೇ ಕಾರಣವಾಗಿರುತ್ತವೆ. ಲೆಕ್ಕಘಟಕಗಳು ಪಾವತಿಸುವ ವಂತಿಗೆ ಮತ್ತು ಅದಕ್ಕೆ ಪೂರಕವಾದ ವಿವರ ಆಧರಿಸಿ ತಂತ್ರಾಂಶದಲ್ಲಿ ವಿವರ ದಾಖಲಿಸುತ್ತಿರುವುದರಿಂದ, ಆ ರೀತಿಯ ನ್ಯೂನತೆಗಳನ್ನು ಈ ಕಛೇರಿಯಲ್ಲಿ ಸರಿಪಡಿಸಲು ಸಾಧ್ಯವಾಗುವುದಿಲ್ಲ ಮತ್ತು ಅಂತಹ ಮನವಿಗಳನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಿಸಿದ ಲೆಕ್ಕಘಟಕಗಳಿಗೆ ಈ ಕಛೇರಿಯಿಂದ ನಿರ್ದೇಶನ ನೀಡಬಹುದಷ್ಟೇ.

ಈ ಹಿನ್ನೆಲೆಯಲ್ಲಿ, ವಂತಿಗೆ ಮೊತ್ತದ ವ್ಯತ್ಯಾಸಗಳನ್ನು ಸರಿಪಡಿಸಿಕೊಳ್ಳುವ ಸಂಬಂಧ ಈ ಕೆಳಗಿನ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ವಂತಿಗೆ ಮೊತ್ತದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಧಿಕಾರಿ/ನೌಕರರು ಆ ಅವಧಿಯಲ್ಲಿ ಕಾರ್ಯ ನಿರ್ವಹಿಸಿದ ಲೆಕ್ಕಘಟಕವನ್ನು ಪ್ರಥಮವಾಗಿ ಸಂಪರ್ಕಿಸಿ, ತಮ್ಮ ವೇತನದಲ್ಲಿ ಕಡಿತಗೊಳಿಸಲಾದ ವಂತಿಗೆ ಮೊತ್ತ ಮತ್ತು ಲೆಕ್ಕಘಟಕದಲ್ಲಿ ಈ ಸಂಬಂಧ ಲೆಕ್ಕೀಕರಿಸಿರುವ ಮೊತ್ತ ತಾಳೆಯಾಗುವುದನ್ನು ಪರಿಶೀಲಿಸಿ ಖಚಿತ ಪಡಿಸಿಕೊಳ್ಳುವುದು.
2. ಮೇಲಿನಂತೆ ಪರಿಶೀಲಿಸಿದಾಗ, ವಂತಿಗೆ ಮೊತ್ತ ಸರಿಯಿದ್ದಲ್ಲಿ ಆ ಮೊತ್ತವನ್ನು ಅನುಬಂಧ-4ರ ವಿವರದ ಮುಖೇನ ನೂತನ ಪಿಂಚಣಿ ಯೋಜನೆ ಘಟಕಕ್ಕೆ ಪಾವತಿಸಿರುವುದನ್ನು ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳಿಂದ ಖಚಿತ ಪಡಿಸಿಕೊಳ್ಳುವುದು.
3. ಮೇಲಿನ ಎರಡೂ ಹಂತಗಳಲ್ಲಿ ವಂತಿಗೆ ಮೊತ್ತ ತಾಳೆಯಾಗಿದ್ದು, ತಂತ್ರಾಂಶದಲ್ಲಿ ಹಾಲಿ ಪ್ರಕಟಿಸಿರುವ ವಂತಿಗೆ ಮೊತ್ತಕ್ಕೆ ಹೊಂದಾಣಿಕೆಯಾಗದಿದ್ದಲ್ಲಿ, ಈ ಕಛೇರಿಗೆ ವಿವರಗಳೊಡನೆ ಮನವಿ ಸಲ್ಲಿಸುವುದು. ಈ ಕಛೇರಿಯಲ್ಲಿ ಅಂತಹ ಮನವಿಗಳನ್ನು ಪರಿಶೀಲಿಸಿ ತಂತ್ರಾಂಶದಲ್ಲಿ ದಾಖಲಿಸುವಾಗ ತಪ್ಪಾಗಿದ್ದರೆ ಸರಿಪಡಿಸಲಾಗುವುದು.

4. ಈ ಹಿಂದಿನ ಅವಧಿಗಳಲ್ಲಿ ವಂತಿಗೆ ಮೊತ್ತವನ್ನು **ಕಡಿತಗೊಳಿಸದೆಯೇ** ವೇತನ ಮತ್ತು ಇತರ ಪಾವತಿಗಳನ್ನು ಪೂರ್ಣ ಪ್ರಮಾಣದಲ್ಲಿ ಫಲಾನುಭವಿಗಳು ಸ್ವೀಕರಿಸಿದ್ದರೆ, ಅಧಿಕಾರಿ/ನೌಕರರು ವಂತಿಗೆ ಮೊತ್ತವನ್ನು ಲೆಕ್ಕ ಹಾಕಿ ಅದನ್ನು ಮುಂದಿನ ಅವಧಿಯಲ್ಲಿ ಕಡಿತಗೊಳಿಸಲು ಮನವಿ ಮಾಡಿ, ಅದಕ್ಕೆ ಸರಿಸಮನಾಗಿ ಉದ್ಯೋಗದಾತರ ವಂತಿಗೆಯನ್ನು ಸೇರಿಸಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಪಾವತಿಸಲು ಅಗತ್ಯ ದೃಢೀಕರಣ(ಹಿಂದಿನ ಸಂಬಂಧಿಸಿದ ಅವಧಿಯಲ್ಲಿ ಪ್ರಸ್ತಾವಿತ ವಂತಿಗೆ ಕಡಿತಗೊಂಡಿರದ ಬಗ್ಗೆ ಆ ಲೆಕ್ಕಘಟಕದ ವೇತನ ಬಟವಾಡೆ ಅಧಿಕಾರಿಯಿಂದ ದೃಢೀಕರಣ) ಸಹಿತ ಈಗ ಕಾರ್ಯನಿರ್ವಹಿಸುತ್ತಿರುವ ಲೆಕ್ಕಘಟಕದ ವೇತನ ಬಟವಾಡೆ ಅಧಿಕಾರಿಗಳಿಗೆ ಮನವಿ ಮಾಡುವುದು. ಈ ರೀತಿಯ ವಂತಿಗೆ ಮೊತ್ತಕ್ಕೆ ಹಿಂದಿನ ಅವಧಿಗೆ ಯಾವುದೇ ಬಡ್ಡಿಯನ್ನು ಸೇರಿಸಲಾಗುವುದಿಲ್ಲ.
5. ಹಿಂದಿನ ಅವಧಿಯಲ್ಲಿ ಲೆಕ್ಕಘಟಕಗಳು ವಂತಿಗೆ ಮೊತ್ತವನ್ನು ಫಲಾನುಭವಿಗಳ ವೇತನ/ಇತರ ಪಾವತಿಗಳಲ್ಲಿ ಕಡಿತಗೊಳಿಸಿ ಕವಿಪ್ರನಿನಿ ಮತ್ತು ವಿಸಕಂಗಳ ನೂತನ ಪಿಂಚಣಿ ಯೋಜನೆ ಘಟಕಕ್ಕೆ ಪಾವತಿಸಿಲ್ಲದಿದ್ದರೆ ಅಂತಹ ಪ್ರಕರಣಗಳಲ್ಲಿ ಲೋಪ ದೃಢೀಕರಣಗೊಂಡ ನಂತರ ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಅಥವಾ ಇತರೆ ಸಂಬಂಧಿಸಿದ ಸಿಬ್ಬಂದಿಯಿಂದ ಬಡ್ಡಿ ನಷ್ಟವನ್ನು ತುಂಬಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು.

ಮೇಲಿನ ಮಾರ್ಗಸೂಚಿಯಂತೆ ಕಾರ್ಯ ಪ್ರವೃತ್ತರಾಗದೇ, ಈ ಕಛೇರಿಗೆ ನೇರವಾಗಿ ಅಥವಾ ಸಮುಚಿತ ಮಾರ್ಗದಲ್ಲಿ ವಂತಿಗೆ ವ್ಯತ್ಯಾಸದ ಬಗ್ಗೆ ಮನವಿ ಸಲ್ಲಿಸಿದರೆ, ಅಂತಹ ಮನವಿಗಳನ್ನು ವಂತಿಗೆ ಕಡಿತದ ವಿವರ ಈ ಕಛೇರಿಯಲ್ಲಿ ಲಭ್ಯವಿರದ ಕಾರಣ ಪರಿಶೀಲನೆಗೋಸ್ಕರ ಸಂಬಂಧಿಸಿದ ಲೆಕ್ಕಘಟಕಗಳಿಗೆ ರವಾನಿಸಲಾಗುತ್ತದೆ. ಹಾಗಾಗಿ ಸಮಸ್ಯೆ ಬಗೆಹರಿಸಲು ವಿಳಂಬವಾಗುತ್ತದೆ.

ಈ ಮೇಲಿನ ಕ್ರಮಗಳಂತೆ ವಂತಿಗೆ ವ್ಯತ್ಯಾಸ ಸರಿಪಡಿಸಬಹುದಾಗಿದ್ದು, **ಬೇರಾವುದೇ ಮಾರ್ಗದಲ್ಲಿ ವಂತಿಗೆ ವ್ಯತ್ಯಾಸ ಮೊತ್ತವನ್ನು ಫಲಾನುಭವಿಗಳ ಮನವಿ ಆಧರಿಸಿ ಖಾತೆಗೆ ಜಮೆ ಮಾಡಲು ಸಾಧ್ಯವಿರುವುದಿಲ್ಲ.** ಆದ್ದರಿಂದ, ಹಿಂದೆ ಲೆಕ್ಕಘಟಕಗಳಲ್ಲಿ ಉಂಟಾಗುವ ಲೋಪದೋಷಗಳನ್ನು ಸರಿಪಡಿಸದೆಯೇ, ಈ ಕಛೇರಿಗೆ ಮನವಿ ಸಲ್ಲಿಸಿ ವ್ಯತ್ಯಾಸದ ಮೊತ್ತವನ್ನು ತಮ್ಮ ಖಾತೆಗೆ ಜಮೆ ಮಾಡಬೇಕೆಂಬ ಮನವಿಗಳನ್ನು ಪುರಸ್ಕರಿಸಲು ಸಾಧ್ಯವಾಗುವುದಿಲ್ಲ.

ಈ ಮೇಲಿನ ಎಲ್ಲಾ ಅಂಶಗಳನ್ನು ನೂತನ ಪಿಂಚಣಿ ಯೋಜನೆಯ ಫಲಾನುಭವಿಗಳು ಅರಿತುಕೊಂಡು ತಮ್ಮ ವಂತಿಗೆ ಮೊತ್ತದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಮೇಲೆ ಸೂಚಿಸಿರುವ ಮಾರ್ಗಸೂಚಿಯನ್ನು ಅನುಸರಿಸಿ, ನ್ಯೂನತೆಯನ್ನು ಸರಿಪಡಿಸಿಕೊಳ್ಳಬೇಕಾಗಿ ಕೋರಿದೆ. ಈ ಪ್ರಕ್ರಿಯೆಯಲ್ಲಿ ಕೆಇಎನ್‌ಡಿಸಿಪಿಎಸ್ ಘಟಕದಿಂದ ಫಲಾನುಭವಿಗಳಿಗೆ ಸರ್ವ ರೀತಿಯಲ್ಲಿ ಸಹಕಾರ ನೀಡಿ ವಂತಿಗೆ ವ್ಯತ್ಯಾಸ ಮತ್ತು ಇತರೆ ನ್ಯೂನತೆ/ಲೋಪದೋಷಗಳ ನಿವಾರಣೆಗೆ ಅನುವು ಮಾಡಿಕೊಡಲಾಗುವುದು.

ನಿರ್ದೇಶಕರು(ಆ ಮತ್ತು ಮಾಸಂ),
ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟಿದೆ.

ಆರ್ಥಿಕ ಸಲಹೆಗಾರರು ಮತ್ತು ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ/ವಿಸಕಂಗಳ ಪಿಂಚಣಿ & ಉಪಾದಾನ ಟ್ರಸ್ಟ್.

ಪ್ರತಿ:

1. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಎಸ್ಕಾಂಗಳು
2. ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ), ಬೆವಿಕಂ/ಎಲ್ಲಾ ಮುಖ್ಯ ಆರ್ಥಿಕ ಅಧಿಕಾರಿಗಳು, ಎಸ್ಕಾಂಗಳು.
3. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಹಿರಿಯ ಆಪ್ತ ಕಾರ್ಯದರ್ಶಿರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
4. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಹಿರಿಯ ಆಪ್ತ ಕಾರ್ಯದರ್ಶಿರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
5. ನಿರ್ದೇಶಕರು (ಹಣಕಾಸು) ರವರ ಹಿರಿಯ ಆಪ್ತ ಕಾರ್ಯದರ್ಶಿರವರಿಗೆ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ **www.kptcl.com>eprasarana**
ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

1. ಎಲ್ಲಾ ಮುಖ್ಯ ಇಂಜಿನಿಯರ್, ಕವಿಪ್ರನಿನಿ / ಎಸ್ಕಾಂಗಳು
2. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
4. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು
5. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ಪರಿಶೋಧನೆ) ಕವಿಪ್ರನಿನಿ / ಎಸ್ಕಾಂಗಳು